ಒಬ್ಬ ವ್ಯಕ್ತಿ ತನ್ನ ಮನವು ಮುರಿದ ಹೋದ ಸಮಯವು ತುಂಬಾ ತೀವ್ರವುಳ್ಳದ್ದೆಂದು ಮತ್ತು ಅದು ಎಂದಿಗೂ ಕ್ಷಮಿಸಲ್ಪಡುವದಿಲ್ಲವೆಂದು ಭಾವಿಸಿದರೆ, ಆ ವ್ಯಕ್ತಿ ತಪ್ಪದೇ ದೇವರ ಕಡೆಗೆ ತಿರುಗಿಕೊಂಡು, ದೇವರ ಕೃಪೆಗಾಗಿ ಬೇಡಿಕೊಳ್ಳಬೇಕು ಮತ್ತು ಇನ್ನೊಬ್ಬರನ್ನು ಕ್ಷಮಿಸುವದನ್ನು ಪ್ರೀತಿಸಬೇಕು. ಆಗ ಕ್ಷಮಿಸಲ್ಪಡುವದಕ್ಕೆ ಅವನಿಗೆ ಬೇಕಾಗುವ ಪ್ರತಿಯೊಂದು ಅಗತ್ಯತೆಗಳನ್ನು ದೇವರು ಪೂರೈಸುತ್ತಾರೆ.

ದೇವರು ನನ್ನನ್ನು ಕ್ಷಮಿಸುವುದಿಲ್ಲವೆಂದು ಕೆಲವರು ಪಾಪಗಳು ಮಾಡಿರುವಂತೆಯೆ, ಈ ಕ್ಷಮೆಯಲ್ಲಿ ನೀವು ಕೂಡಾ ಒಳಗೊಂಡಿರುವಿರಿ. ಬಸಿರಿಳಿತ ಮಾಡಿಸಿಕೊಂಡಿರುವ ಸ್ತ್ರೀಯರಿಗೆ ಇದು ಪ್ರತೇಕವಾದ ಸತ್ಯವಾಗಿರುತ್ತದೆ. ಈ ಒಂದು ಭಯಂಕರ ಪಾಪಕ್ಕಾಗಿ ಆಕೆ ಪಶ್ಚಾತ್ತಾಪ ಹೊಂದಿ, ಯೇಸು ಕ್ರಿಸ್ತನನ್ನು ತನ್ನ ರಕ್ಷಕನೆಂದು ತಿರುಗಿಕೊಂಡರೆ, ಆಗ ದೇವರು ಕ್ಷಮಿಸುತ್ತಾರೆ. ಗುಣ ಹೊಂದಿದ ಮನವನ್ನು ಹೊಂದಿಕೊಳ್ಳಲು ಆತನ ಕ್ಷಮೆಯನ್ನು ಆಕೆ ತಪ್ಪದೇ ಅಂಗೀಕರಿಸಬೇಕು.

ಕೆಲವರು ಕೆಲವು ಕಾರಣಗಳಿಂದ ದೇವರಿಗೆ ವಿರುದ್ಧವಾಗಿ ದ್ವೇಷವನ್ನು ಇಟ್ಟುಕೊಂಡಿರುತ್ತಾರೆ. ಈ ವ್ಯಕ್ತಿಯ ಮನವು ಗುಣ ಹೊಂದುವದಕ್ಕೆ ಅವನಲ್ಲಿರವ ದ್ವೇಷವನ್ನು ದೇವರ ಮುಂದೆ ತಪ್ಪದೇ ಒಪ್ಪಿಕೊಳ್ಳಬೇಕು. ಅವರ ಮನವನ್ನು ಮುರಿದ ಯಾವುದನ್ನಾಗಲಿ ಅಥವಾ ಯಾರನ್ನಾಗಲಿ ಒಂದು ಸಲ ಕ್ಷಮಿಸಿದರೆ, ಆ ವ್ಯಕ್ತಿಯ ಮನವನ್ನು ಗುಣಪಡಿಸಲು ದೇವರು ಈಗ ಸಿದ್ಧವಾಗಿರುತ್ತಾರೆ ಮತ್ತು ಆ ಮನುಷ್ಯನನ್ನು ಬಿಡುಗಡೆ ಮಾಡುತ್ತಾನೆ.

ಮುರಿದ ಮನವನ್ನು ಗುಣಪಡಿಸುವದೆನ್ನುವುದು ದೇವರಿಗೆ ತುಂಬಾ ಪ್ರಾಮುಖ್ಯವಾದ ವಿಷಯವಾಗಿರುತ್ತದೆ. ಇದು ಆತನಿಗೆ ಚಿಕ್ಕ ವಿಷಯವಲ್ಲ. ಆದರೆ ನಿತ್ಯ ರಕ್ಷಣೆಯನ್ನುಂಟು ಮಾಡುವ ಯೇಸು ಕ್ರಿಸ್ತನ ಸುವಾರ್ತೆಯು ಆದನಂತರ ಬಲ ಸ್ಥಾನದಲ್ಲಿರುವ ವಿಷಯ. ದೇವರ ಪ್ರೀತಿ ಮತ್ತು ಸಮಾಧಾನಗಳಿಂದ ತುಂಬಿರುವ ಗುಣ ಹೊಂದಿದ ಮನದೊಂದಿಗೆ ಜೀವಿಸಲು ನಮಗೆ ಬೇಕಾಗುವಂಥಹ ಎಲ್ಲಾ ಅಗತ್ಯತೆಗಳನ್ನು ದೇವರು ನಮಗೆ ಒದಗಿಸಿ ಕೊಟ್ಟಿದ್ದಾರೆ.

---


Chaplain John P. McTernan
Bishop Reinhard C. Sekar
Contact
BrokenHeartedIndia@gmail.com
Luke14.8Heal@gmail.com
www.USAPROPHECY.com
www.CCIDIOCESE.org
www.McTbrochures.com


## ಮನ ಮುರಿಯಲ್ಪಟ್ಟವರಿಗಾಗಿ ಪ್ರಾರ್ಥನೆ

"ದೇವರೇ ನಿಮ್ಮ ಬಳಿ ನನ್ನ ಪಾಪಗಳನ್ನು ಒಪ್ಪಿಕೊಳ್ಳುತ್ತಿದ್ದೇನೆ ಮತ್ತು ಪಶ್ಚಾತ್ತಾಪ ಪಡುತ್ತಿದ್ದೇನೆ. ನನ್ನ ಪಾಪಗಳಿಗಾಗಿ ಯೇಸು ಕ್ರಿಸ್ತರವರು ಕಲಾರಿ ಶಿಲುಬೆಯಲ್ಲಿ ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿದ್ದಾನೆ ಮತ್ತು ಸತ್ತು ಹೋಗಿದ್ದಾನೆ. ಈಗ ನಾನು ಯೇಸು ಕ್ರಿಸ್ತ ನನ್ನ ರಕ್ಷಕನು ಮತ್ತು ಒಡೆಯನೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಅಷ್ಟೇ ಅಲ್ಲದೇ, ನನ್ನ ತಂದೆಯಾದ ದೇವರ ಹಾಗೆಯೇ ನಿಮ್ಮೊಂದಿಗೆ ನನ್ನ ನಿತ್ಯ ಜೀವವು ಇದೆಯೆಂದು ತಿಳಿದು ಕೊಂಡಿದ್ದೇನೆ.

ತಂದೆಯಾದ ದೇವರೆ, ನೀವು ಮುರಿದು ಹೋಗಿರುವಂತಹ ನನ್ನ ಮನವನ್ನು ಗುಣಪಡಿಸಬೇಕೆಂದು ನಿಮ್ಮಲ್ಲಿ ಬೇಡುತ್ತಿದ್ದೇನೆ. ನನ್ನ ಮನವನ್ನು ಮುರಿದ ಪ್ರತಿಯೊಬ್ಬರನ್ನು ನಾನು ಕ್ಷಮಿಸಿದ್ದೇನೆ. ಭಯ, ತಳಮಳ, ಭೀತಿ, ದ್ವೇಷ, ನಿರಾಸೆ, ಕಹಿತನ ಮತ್ತು ತಳ್ಳಿಹಾಕಲ್ಪಟ್ಟವುಗಳಿಂದ ನನ್ನನ್ನು ಗುಣಪಡಿಸು. ಮಾದಕ ದ್ರವ್ಯಗಳು, ಮಧ್ಯಪಾನ ಮತ್ತು ಎಲ್ಲಾ ಕೆಟ್ಟ ಛಟಗಳಿಂದ ನನ್ನನ್ನು ಬಿಡಿಸು ಸ್ವಾಮಿ. ನನ್ನ ಪಾಪಗಳಿಂದ ಬಿಡಿಸುವುದಕ್ಕಾಗಿ ಮತ್ತು ಮುರಿಯಲ್ಪಟ್ಟಿರುವ ನನ್ನ ಮನವನ್ನು ಗುಣಪಡಿಸುವದಕ್ಕಾಗಿ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದ್ದಕ್ಕಾಗಿ ನಿಮಗೆ ವಂದನೆಗಳು"

"ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದ್ಧಿ ಪಡಿಸುವದಕ್ಕೂ **ಮನ ಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ** ಕರ್ತನು ನೇಮಿಸಿರುವ ಶುಭ ವರ್ಷವನ್ನು ಪ್ರಚುರ ಪಡಿಸುವದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ..." – **ಲೂಕ.4:18.**



### ಮನಮುರಿದವರನ್ನು ಗುಣಪಡಿಸುವದಕ್ಕಾಗಿ

# ಯೇಸು ಕ್ರಿಸ್ತನು

### ಬಂದಿದ್ದಾನೆ.

"...ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ...
ಆತನು ನನ್ನನ್ನು ಕಳುಹಿಸಿದ್ದಾನೆ" - **ಲೂಕ.4:18.**

"...ಮನಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ...
ಆತನು ನನ್ನನ್ನು ಕಳುಹಿಸಿದ್ದಾನೆ" - **ಯೆಶಾಯ.61:1.**



ಈ ದಿನಗಳಲ್ಲಿ ಮಾದಕ ದ್ರವ್ಯಗಳ ಉಪಯೊಗ, ನಿರುತ್ಸಾಹ ಮತ್ತು ಆತ್ಮಹತ್ಯೆ ಎನ್ನುವವುಗಳಿಂದ ವಿಷಮಸ್ಥಿತಿ ಅವರಿಸಿಕೊಂಡಿದೆ. ಸಹಜವಾಗಿ, ಮಾದಕ ದ್ರವ್ಯಗಳ ಕುರಿತು ಮಾತನಾಡುವಾಗ, ಜನರು ಕೊಕೇಯಿನ್, ಕ್ರಾಕ್, ಹೆರೊಯಿನ್ ಅಥವಾ ಮರಿಜುವಾನ ಎಂದು ತಿಳಿದುಕೊಳ್ಳುತ್ತಾರೆ. ಇದು ಕೇವಲ ಸಮಸ್ಯೆಯಲ್ಲಿ ಒಂದು ಭಾಗ ಮಾತ್ರವೇ ಆಗಿರುತ್ತದೆ. ಪ್ರೊಜಾಕ್ ಮತ್ತು ಇತರ ಶಮನಕಾರಿಗಳಂಥಹ ವೈದ್ಯರು ಕೊಡುವ ಔಷಧಗಳು ಈ ದೊಡ್ಡ ಚಿತ್ರದಲ್ಲಿ ಒಳಗೊಂಡಿರುತ್ತವೆ. ಇವುಗಳೊಂದಿಗೆ ವಾಲಿಯಂ ಮತ್ತು ತಳಮಳ ಮಾಡುವ ಇತರ ಔಷಧಗಳು ಕೂಡಾ ಇದರಲ್ಲಿ ಸೇರಿಬರುತ್ತವೆ. ಮಧ್ಯಪಾನವನ್ನು (ಅಲ್ಕೋಹಾಲ್) ಹೆಚ್ಚಾಗಿ ಬಳಸಿದರೇ, ಲಕ್ಷಗಟ್ಟಲೆ ಅಮೇರಿಕನ್ನರು ಎಲ್ಲಾ ವಿಧವಾದ ಮಾದಕ ದ್ರವ್ಯಗಳನ್ನು ಬಳಸುತ್ತಿದ್ದಾರೆ.

ನಿರಾಸೆಗೆ ಒಳಗಾದವರು, ತಳಮಳದಿಂದ ನರಳುತ್ತಿರುವವರು ಮತ್ತು ತೀವ್ರವಾದ ಒತ್ತಡಕ್ಕೆ ಒಳಗಾದವರು ಅಸಂಖ್ಯಾಕ ಜನರು ಈ ಚಿತ್ರದಲ್ಲಿ ಸೇರಿರುತ್ತಾರೆ. ಆದರೆ ಅವರು ಯಾರು ಯಾವ ವಿಧವಾದ ಔಷಧಗಳನ್ನು ತೆಗೆದುಕೊಳ್ಳುತ್ತಿಲ್ಲ. ಪ್ರತಿಯೊಂದು ವರ್ಷವು ಈ ವಿಷಗಳಲ್ಲಿ ಸಿಳುಕಿಕೊಂಡು ಅನೇಕರು ನಾಶವಾಗುತ್ತಿದ್ದಾರೆ. ತಮ್ಮ ಪ್ರಾಣಗಳನ್ನು ತೆಗೆದುಕೊಳ್ಳುವವರ ಸಂಖ್ಯೆಯು ಕೂಡಾ ಹೆಚ್ಚಾಗಿದೆ. ಈ ವಿಷಯಗಳೆಲ್ಲವೂ ತುಂಬಾ ತೀವ್ರವುಳ್ಳವುಗಳು. ಇವು ಒಬ್ಬರ ಒಳ್ಳೆಯ ಆರೋಗ್ಯ ನಾಶಕ್ಕೂ ಮತ್ತು ಮರಣಕ್ಕೂ ನಡೆಸುತ್ತವೆ.

ಮುರಿದು ಹೋಗಿರುವ ಮನದ ಗಾಯಗಳನ್ನು ಗುಣಪಡಿಸಿಕೊಳ್ಳಲು ಜನರು ಸಹಜವಾಗಿ ಮಾದಕ ದ್ರವ್ಯಗಳು ಅಥವಾ ಔಷಧಗಳು ಉಪಯೋಗಿಸುವುದು ಸಹಜವಾದ ಕಾರ್ಯ. ನೋವು ಮತ್ತು ಬಾಧೆಗಳನ್ನು ಅಡಗಿಸಲು ಅವರು ಎಷ್ಟೊಂದೋ ಮಾರ್ಗಗಳನ್ನು ನೋಡುತ್ತಿರುವಂತೆ ಇದು ಸ್ವಂತವಾಗಿ ತಮ್ಮಷ್ಟಕ್ಕೆ ತಾವು ತೆಗೆದುಕೊಳ್ಳುವ ರೂಪವಾಗಿರುತ್ತದೆ. ಒಳಗಿನ ನೋವಿಗೆ ಗುಣವಾಗುವುದು ಬೇಕು ಮತ್ತು ಸಮಾಧಾನವೂ ಸಿಗಬೇಕು. ಈ ಕಾರಣದಿಂದಲೇ ದೇವರು ಯೇಸು ಕ್ರಿಸ್ತನನ್ನು ಈ ಭೂಲೋಕಕ್ಕೆ ಕಳುಹಿಸಿಕೊಟ್ಟಿದ್ದಾರೆ. ಮನ ಮುರಿದವರನ್ನು ಗುಣಪಡಿಸುವುದಕ್ಕೆ ಆತನು ಬಂದಿದ್ದಾನೆ ಮತ್ತು ಅತ್ಯವಶ್ಯಕವಾಗಿ ಬೇಕಾಗಿರುವ ಒಳಗಿನ ಸಮಾಧಾನವನ್ನು ಕೊಡುವುದಕ್ಕೆ ಬಂದಿದ್ದಾನೆ.

ಮನವು ಮುರಿದು ಹೋದಾಗ ಏನು ಉಂಟಾಗುತ್ತದೆಯೆಂದು ವಿವರಿಸಲು ಬೈಬಲ್ ವರ್ಣನಾತ್ಮಕವಾದ ಪದಗಳನ್ನು ಉಪಯೋಗಿಸುತ್ತದೆ. ತೋರಿಸುತಿರುವ ಚಿತ್ರದಲ್ಲಿ ಹೃದಯವು ಮುರಿದುಹೋಗಿ, ತುಂಡು ತುಂಡುಗಳಾಗಿ ಇರುವುದನ್ನು ನೋಡುತ್ತಿದ್ದೇವೆ. ನೀವು ಎಂದಾದರೂ ತುಂಬಾ ಹೆಚ್ಚಾಗಿ ಮುರಿದು ಹೋಗಿರುವ ಎಲುಬುಗಳನ್ನು ನೋಡಿದ್ದರೆ, ಆತ್ಮೀಯಕವಾಗಿ ಮುರಿದು ಹೋಗಿರುವ ಮನವು ಹೀಗಿರುತ್ತದೆಯೆಂದು ತಿಳಿದುಕೊಳ್ಳುವಿರಿ!

ಮುರಿದು ಹೋಗಿರುವ ಮನದಲ್ಲಿ ಕೋಪ, ಭಯ, ತಳಮಳ, ಭೀತಿ, ದ್ವೇಷ, ಕಹಿತನಗಳನ್ನು ಒಳಗೊಂಡಿರುತ್ತದೆ. ಈ ಎಲ್ಲಾ ಭಾವನೆಗಳು ಭಯಂಕರವಾದ ನಿರಾಸೆಗೆ ಮತ್ತು ಮಾದಕ ದ್ರವ್ಯಗಳ ಕಡೆಗೆ ಗುರಿ ಮಾಡಲು ನಡೆಸುತ್ತವೆ. ಇವುಗಳನ್ನೇ ಮುರಿಯಲ್ಪಟ್ಟಿರುವ ಮನವು ಉತ್ಪನ್ನ ಮಾಡುತ್ತದೆ ಮತ್ತು ಇವುಗಳೇ ಮನ ಮುರಿಯಲ್ಪಟ್ಟಿದೆ ಎಂದು ಗುರುತಿಸುವದಕ್ಕೆ ಚಿಹ್ನೆಗಳಾಗಿರುತ್ತವೆ. ನಿಜವಾದ ಸಮಸ್ಯೆ ಏನಂದರೆ ಮನ ಮುರಿಯಲ್ಪಟ್ಟಿರುವದಾಗಿರುತ್ತದೆ.

## ಹೃದಯವನ್ನು ಕುಗ್ಗಿಸುವಂತಹ ವಿಷಯ:

ವಿಚ್ಛೇದನ (ಇದು ಪ್ರತ್ಯೇಕವಾಗಿ ಮಕ್ಕಳನ್ನು ಹಾಳುಮಾಡುತ್ತದೆ); ಅಪವ್ಯಯ (ಭೌತಿಕವಾಗಿಯೂ ಮತ್ತು ಮಾನಸಿಕವಾಗಿಯೂ); ಪರಿತ್ಯಾಗ; ತಿರಸ್ಕರಣೆ; ದ್ವೇಷ; ಯುದ್ಧ; ಗರ್ಭಪಾತ; ದುರಂತ; ಮತ್ತು ಮರಣ. ನಮ್ಮ ಹೃದಯವನ್ನು ಕುಗ್ಗಿಸಲು ಈ ಲೋಕವು ಸೃಷ್ಟಿಸಲ್ಪಟ್ಟಿದೆ. ಒಮ್ಮೆ ನಮ್ಮ ಹೃದಯ ಮುರಿದು ಹೋದರೆ, ಅದನ್ನು ಗುಣಪಡಿಸಲು ಈ ಭೂಲೋಕದಲ್ಲಿ ಯಾವುದು ಇಲ್ಲ. ಮನೋವಿಜ್ಞಾನ ಮತ್ತು ಅದರ ಎಲ್ಲಾ ಔಷದಿಗಳು ಅದನ್ನು ಗುಣಪಡಿಸಲು ಸಾಧ್ಯವಿಲ್ಲ. ಮುರಿದುಹೋಗಿರುವ ಹೃದಯವನ್ನು ಗುಣಪಡಿಸಲು ಈ ಲೋಕದಲ್ಲಿ ಏನೂ ಇಲ್ಲ ಯಾಕೆಂದರೆ ಅದರ ಬೇರುಗಳು ಆತ್ಮೀಯತೆಯಲ್ಲಿವೆ. ಮುರಿದಿರುವ ಹೃದಯದ ಪರಿಣಾಮಗಳನ್ನು ಕಡಿಮೆ ಮಾಡಬಲ್ಲೆವು ಅಥವಾ ನಿಭಾಯಿಸಬಹುದು, ಆದರೆ ಯೇಸು ಕ್ರಿಸ್ತನು ಮಾತ್ರವೇ ಮುರಿದಿರುವ ಹೃದಯವನ್ನು ಗುಣಪಡಿಸುವವನು. "ದೊಡ್ಡ ವೈದ್ಯನು" ಎನ್ನುವುದು ಆತನಿಗಿರುವ ಬಿರುದುಗಳಲ್ಲಿ ಒಂದು, ಮುರಿದಿರುವ ಹೃದಯಗಳನ್ನು ಗುಣಪಡಿಸಲು ದೇವರು ಆತನನ್ನು ಕಳುಹಿಸಿದ್ದಾನೆ.

ಒಂದು ಕಾಲು ಮುರಿದರೇ, ವೈದ್ಯರು ಮುರಿದ ಮೂಲೆಗಳನ್ನು ಒಂದುಗೂಡಿಸಿ ಮತ್ತು ಕಟ್ಟನ್ನು ಕಟ್ಟುವನು. ಕೆಲವೊಮ್ಮೆ ಮೂಲೆಗಳಿಗೆ ಸ್ಕೃಗಳನ್ನು ಹಾಕಿ ಅದರ ಮೇಲೆ ಕಟ್ಟು ಹಾಕುವರು. ದೊಡ್ಡ ವೈದ್ಯನು ಈ ವಿಧವಾಗಿಯೇ ಮುರಿದಿರುವ ಹೃದಯವನ್ನು ಗುಣಪಡಿಸುವನು. ಆತನು ಮುರಿದಿರುವ ಎಲ್ಲಾ ತುಂಡುಗಳನ್ನು ತೆಗೆದುಕೊಂಡು, ಅವುಗಳನ್ನು ಜೋಡಿಸುವನು ಮತ್ತು ಹೃದಯವನ್ನು ಕಟ್ಟುವನು, ಅದರಿಂದ ಅದು ಗುಣಹೊಂದುವುದು ಮತ್ತು ಗುಣಹೊಂದಿರುವುದು!

ಮುರಿದಿರುವ ಹೃದಯವನ್ನು "ಕಲ್ಲಾದ ಹೃದಯ" ಎಂದು, ಆದರೆ ಯೇಸು ಕ್ರಿಸ್ತನಿಂದ ಗುಣಹೊಂದಿದ ಹೃದಯವನ್ನು "ಮೃದುವಾದ ಹೃದಯ" ಎಂದು ಬೈಬಿಲ್ ಗ್ರಂಥ ಕರೆಯುತ್ತದೆ. ಅದನ್ನು ನಾವು ಹೃದಯದ ಬದಲಾವಣೆ (ಹಾರ್ಟ್ ಟ್ರಾನ್ಸಪ್ಲಾಂಟ್) ಎನ್ನಬಹುದು. "ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮಗೆ ದಯಪಾಲಿಸುವೆನು." – **ಯೆಹೆಜ್ಕೇಲನು 36:26**.

ಗುಣಹೊಂದಿದ ನೂತನ ಹೃದಯ ದೇವರೊಂದಿಗೆ ಅನ್ಯೋನ್ಯತೆ ಹೊಂದಿರುವುದು. ಅದರಲ್ಲಿ ದೇವರ ಪ್ರೀತಿ ಮತ್ತು ಸಮಾಧಾನ ಹೊಂದಿರುವುದು. ಯಾತನೆ ನೀಡುತ್ತಿದ್ದ ಆ ಎಲ್ಲಾ ಹಾವಭಾವಗಳು ಈಗ ಶಾಶ್ವತವಾಗಿ ಮುಗಿದುಹೋಗುವವು ಮತ್ತು ಜನರು ದೇವರ ಸಮಾಧಾನವನ್ನು ಅವರ ಹೃದಯದಲ್ಲಿ ತುಂಬಿಸಿಕೊಂಡು ಸ್ವತಂತ್ರರಾಗಿ ಜೀವಿಸುವರು.  ಜನರನ್ನು ಪೀಡಿಸುತ್ತಿರುವ ಭಯ, ಕಳವಳ ಮತ್ತು ನಿರುತ್ಸಾಹ ಎನ್ನುವವುಗಳಿಗೆ ಪವಿತ್ರಾತ್ಮನ ಬಲವಾದ ಶಕ್ತಿಯಿಂದ, ದೇವರು ಮುರಿದುಹಾಕುವ ಸಮರ್ಥನಾಗಿದ್ದಾನೆ. "ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ." – **2 ತಿಮೊಥಿ 1:7**.

ಆತನ ಪ್ರೀತಿ ಮತ್ತು ಸಮಾಧಾನವನ್ನು ಹೊಂದಿರುವಂತೆ ದೇವರು ಗುಣಪಡಿಸಿರುವ ಹೃದಯವನ್ನು ನಿರ್ಮಿಸಿದ್ದಾನೆ. ನಾವು ದೇವರಲ್ಲಿ ಬೆಳೆಯುತ್ತಿರುವಾಗ, ಯಾರು ನಮ್ಮ ಸಮಾಧಾನವನ್ನು ತೆಗೆಯಲಾರದಷ್ಟು ಮತ್ತು ಆತನ ಪ್ರೀತಿಯನ್ನು ಯಾವುದು ನಮ್ಮ ಹೃದಯದಿಂದ ದೂರಪಡಿಸಲಾರದಷ್ಟು, ಆತನ ಪ್ರೀತಿ ಮತ್ತು ಸಮಾಧಾನಗಳು ನಮ್ಮಲ್ಲಿ ಬೆಳೆಯುತ್ತವೆ. ಮನ ಮುರಿದವರನ್ನು ಗುಣಪಡಿಸಲು ಯೇಸು ಕ್ರಿಸ್ತನನ್ನು ದೇವರು ಕಳುಹಿಸಿಕೊಟ್ಟಿದ್ದಾನೆ. ಆದುದರಿಂದ ದೇವರ ಪ್ರೀತಿ ಮತ್ತು ಸಮಾಧಾನಗಳ ಸಂಪೂರ್ಣತೆಯಲ್ಲಿ ಆತನೊಂದಿಗೆ ನಾವು ಜೀವಿಸಬಹುದು!

ಮುರಿದು ಹೋಗಲ್ಪಟ್ಟಿರುವ ಮನವನ್ನು ಗುಣಪಡಿಸುವದರಲ್ಲಿ ಮೊಟ್ಟ ಮೊದಲನೇಯ ಮೆಟ್ಟಿಲು ಏನಂದರೆ ಯೇಸು ಕ್ರಿಸ್ತನ ಸುವಾರ್ತೆಯನ್ನು ನಂಬುವುದಾಗಿರುತ್ತದೆ. ದೇವರು ಮುರಿದು ಹೋಗಲ್ಪಟ್ಟಿರುವ ಮನವನ್ನು ಗುಣಪಡಿಸುವುದಕ್ಕಿಂತ ಮೊದಲು, ಪಾಪ ಎನ್ನುವ ಸಮಸ್ಯೆಯ ಕುರಿತಾಗಿ ಇಲ್ಲಿ ಮಾತನಾಡಬೇಕಾಗಿದೆ.

ಪಾಪ ಎನ್ನುವುದು ತೀವ್ರವಾದದ್ದು ಮತ್ತು ಅದರಿಂದ ಜನರು ದೇವರಿಗೆ ದೂರವಾಗುತ್ತಿದ್ದಾರೆ. ಈ ಕಾರಣದಿಂದಲೇ,  ದೇವರು ಈ ದೂರವನ್ನು ಸಮೀಪ ಮಾಡುವದಕ್ಕೆ ಯೇಸು ಕ್ರಿಸ್ತನನ್ನು ಕಳುಹಿಸಿಕೊಟ್ಟಿದ್ದಾರೆ.

ಪಾಪಕ್ಕೆ ಬರುವಂತಹ ಸಂಬಳ ಮರಣ. ಆದರೆ ಯೇಸು ಕ್ರಿಸ್ತನು ಶಿಲುಬೆಯಲ್ಲಿ ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿ ಸತ್ತು ಹೋಗಿದ್ದರಿಂದ ನಿಮ್ಮ ಪಾಪಗಳಿಗಾಗಿ ದಂಡನೆಯನ್ನು ಕಟ್ಟಿದ್ದಾನೆ. ಇದರ ಅರ್ಥವೇನಂದರೆ ಪಾಪಗಳ ವಿಷಯವಾಗಿ ಪಶ್ಚಾತ್ತಾಪ ಹೊಂದುವದರ ಮೂಲಕ ದೇವರೊಂದಿಗೆ ಸಮಾಧಾನವು ಪಡೆದುಕೊಳ್ಳಬಹುದು ಮತ್ತು ಕ್ಷಮೆಯನ್ನು ಹೊಂದಿಕೊಳ್ಳಬಹುದು. ಅಷ್ಟೇ ಅಲ್ಲದೇ ಇದು ದೇವರೊಂದಿಗೆ ನಿತ್ಯ ಜೀವದ ವಾಗ್ದಾನವು ನಿಮಗೆ ಕೊಡುತ್ತದೆ. ಪಾಪದ ಸಮಸ್ಯೆಯೊಂದಿಗೆ ಬಗೆಹರಿಸಿಕೊಂಡರೆ, ನಿಮ್ಮ ಹೃದಯವನ್ನು ಗುಣಪಡಿಸಲು ದೇವರು ಎಂದಿಗೂ ಸಿದ್ಧರಾಗಿರುತ್ತಾರೆ.

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." – **ಯೋಹಾನ.3:16**.

ಎರಡನೇಯ ಮೆಟ್ಟಿಲು ನೀವು ಇನ್ನೊಬ್ಬರನ್ನು ಕ್ಷಮಿಸುವುದರಲ್ಲಿ ಒಳಗೊಂಡಿರುತ್ತದೆ. ಕ್ಷಮಿಸುವುದರಲ್ಲಿ ತಂದೆತಾಯಿಗಳಿರಬಹುದು, ನಿಮ್ಮನ್ನು ನೀವೇ ಕ್ಷಮಿಸಿಕೊಳ್ಳುವುದಾಗಿರಬಹುದು ಅಥವಾ ದೇವರೊಂದಿಗೆ ಸಮಾಧಾನ ಹೊಂದುವುದಾಗಿರಬಹುದು. ದೇವರು ಯೇಸು ಕ್ರಿಸ್ತನ ಮೂಲಕ ನಮ್ಮ ಪಾಪಗಳನ್ನೆಲ್ಲಾ ಕ್ಷಮಿಸುವರು ಮತ್ತು ನಮಗೆ ವಿರುದ್ಧವಾಗಿ ಪಾಪ ಮಾಡಿದವರನ್ನು ಮತ್ತು ನಮ್ಮ ಮನವನ್ನು ಮುರಿದವರನ್ನು ನಾವು ಕ್ಷಮಿಸಬೇಕೆಂದು ಆತನು ನಮ್ಮಿಂದ ಎದುರು ನೋಡುತ್ತಿದ್ದಾರೆ.

"ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು." – **ಮತ್ತಾಯ.6:14**.

